ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :– ಇದೇನು? ಅದಕ್ಕೆ ನಾನು ಹೇಳಿದ್ದು. ಇದು ಉತ್ತರವೇ? ನೀವು ಕೊಟ್ಟಿರುವಂತಹ ಉತ್ತರದಲ್ಲಿ ಇದೆಲ್ಲ ಇದೆ.

(ಗೊಂದಲ)

ಶ್ರೀ ಬಂಡೆಪ್ಪ ಖಾಶೆಂಪೂರ್ :– Immediate ಆಗಿ, intervene ಆಗಿ, ಅಲ್ಲಿ ರೈತರು ತೊಗರಿ ತಂದು ಹಾಕಿದ್ದಾರೆ.

ಶ್ರೀ ಈಶ್ವರ ಭೀಮಣ್ಣ ಖಂಡ್ರೆ :– ಮಾನ್ಯ ಅಧ್ಯಕ್ಷರೆ, ಅಲ್ಲಿ ಒಂದು ತಿಂಗಳು ಖರೀದಿ ಮಾಡಿದ್ದೇವೆಂದು ಹೇಳಿದ್ದಾರೆ, ಆದರೆ ಅವರು ನಿಜವಾಗಿ ಖರೀದಿ ಮಾಡಿದ್ದು 2–3 ದಿವಸ ಮಾತ್ರ ಅಷ್ಟೆ.

(ಗೊಂದಲ)

(ಈ ಹಂತದಲ್ಲಿ ಶ್ರೀ ಬಂಡೆಪ್ಪ ಖಾಶೆಂಪೂರ್‌ರವರು, ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್, ಶ್ರೀ ಸುಭಾಷ್ ರುಕ್ಮಯ್ಯ ಗುತ್ತೇದಾರ್, ಶ್ರೀ ರಹೀಂ ಖಾನ್‌ರವರು ಧರಣಿ ಮಾಡಲು ಬಾವಿಗೆ ಬಂದರು)

ಅಧ್ಯಕ್ಷರು :– ಇಲ್ಲಿ ಮಾತನಾಡಬೇಡಿ. ಯಾವುದೂ ದಾಖಲೆಗೆ ಹೋಗುವುದಿಲ್ಲ.

(ಗೊಂದಲ)

ಅಧ್ಯಕ್ಷರು :– ಅವರು ಕಾರಣ ಹೇಳಿದ್ದಾರಲ್ಲ. ಈಗ ಸದನವನ್ನು ನಾಳೆ ಬೆಳಿಗ್ಗೆ 10.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನದ ಕಲಾಪವು ರಾತ್ರಿ 8.10 ಕ್ಕೆ ಮುಕ್ತಾಯವಾಗಿ ಮತ್ತೆ ದಿನಾಂಕ : 28.03.2012 ರಂದು ಬುಧವಾರ ಬೆಳಿಗ್ಗೆ 10.00 ಗಂಟೆಗೆ ಸೇರಲು ನಿಶ್ಚಯಿಸಿತು)

8. ಅನುಬಂಧ–1

ರೈಲ್ವೆ ಮಾರ್ಗದ ಕಾಮಗಾರಿ ವಿಳಂಬ

69 : (98)

ಶ್ರೀ ನಾಡಗೌಡ ವೆಂಕಟರಾವ್ (ಸಿಂಧನೂರು)

ಅ) ಮುನಿರಾಬಾದ್ (ಗಿಣಿಗೇರಾ) – ಮೆಹಬೂಬ್ ನಗರ ಹೊಸ ರೈಲ್ವೆ ಮಾರ್ಗದ ಕಾಮಗಾರಿಯು ಮಂದಗತಿಯಲ್ಲಿ ಸಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಆ) ಹಾಗಿದ್ದಲ್ಲಿ, ಈ ರೈಲ್ವೆ ಮಾರ್ಗದ ಕಾಮಗಾರಿಯು ಮಂದಗತಿಯಲ್ಲಿ ಸಾಗುತ್ತಿರಲು ಕಾರಣಗಳೇನು;

ಇ) ಈ ರೈಲ್ವೆ ಮಾರ್ಗದ ಕಾಮಗಾರಿಯು ಮಂದಗತಿಯಲ್ಲಿ ಸಾಗುತ್ತಿರುವುದರಿಂದ ಈ ಭಾಗದ ಜನರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಈ ರೈಲ್ವೆ ಮಾರ್ಗದ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಲು ಸರ್ಕಾರಕ್ಕಿರುವ ತೊಂದರೆಗಳೇನು;

ಉ) ಈ ರೈಲ್ವೆ ಮಾರ್ಗದ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಡಿ.ವಿ. ಸದಾನಂದಗೌಡ

ಅ) ಬಂದಿದೆ.

ಆ) ಈ ಮಾರ್ಗದ ಯೋಜನೆಗೆ 2007–08ನೇ ಸಾಲಿನಲ್ಲಿ ರೈಲ್ವೆ ಮಂಡಳಿಯು ಮಂಜೂರಾತಿಯನ್ನು ನೀಡಿದೆ. ಮಾರ್ಗಕ್ಕೆ ಬೇಕಾದ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ವಿಳಂಬವಾಗಿರುವುದರಿಂದ ಕಾಮಗಾರಿಯು ಮಂದಗತಿಯಲ್ಲಿ ನಡೆಯುತ್ತಿತ್ತು.

ಇ) ಬಂದಿದೆ

ಈ) ಈ ಮಾರ್ಗಕ್ಕೆ ಬೇಕಾದ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ರೈಲ್ವೆ ಇಲಾಖೆಗೆ ಹಸ್ತಾಂತರಿಸಲಾಗಿದೆ. ಕಾಮಗಾರಿಯು ಪ್ರಗತಿಯಲ್ಲಿದೆ.

ಉ) ಈ ಮಾರ್ಗದ ಕಾಮಗಾರಿಯನ್ನು 2015–16ನೇ ಸಾಲಿನೊಳಗಾಗಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಆಲಮಟ್ಟಿ ಜಲಾಶಯದಿಂದ ಬೆಂಗಳೂರಿಗೆ ಕುಡಿಯುವ ನೀರು

80 : (162)

ಶ್ರೀ ರಾಮಲಿಂಗಾರೆಡ್ಡಿ ವಿಧಾನಸಭಾ ಸದಸ್ಯರು (ಬಿ.ಟಿ.ಎಂ. ಲೇಔಟ್)

ಅ) ಬೆಂಗಳೂರು ನಗರದಲ್ಲಿನ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಲು ಆಲಮಟ್ಟಿ ಜಲಾಶಯದಿಂದ ನೀರನ್ನು ತರುವ ಯೋಜನೆಯನ್ನು ಸರ್ಕಾರ ರೂಪಿಸಿದೆಯೇ?

ಆ) ಹಾಗಿದ್ದಲ್ಲಿ, ಇದಕ್ಕೆ ತಗಲುವ ಅಂದಾಜು ವೆಚ್ಚವೆಷ್ಟು?

ಇ) ಈ ಉದ್ದೇಶಿತ ಯೋಜನೆಯಿಂದ ಬೆಂಗಳೂರು ನಗರಕ್ಕೆ ಬರುವ ನೀರಿನ ಪ್ರಮಾಣವೆಷ್ಟು?